ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಪಟ್ಟಾಭೂಮಿಯನ್ನು ಕಲ್ಲುಗಣಿಗಾರಿಕೆಗೆ ಬಳಕೆ ಮಾಡಬೇಕಾದಲ್ಲಿ, ಭೂಕಂದಾಯ ಅಧಿನಿಯಮ 1964ರ ಕಲಂ 95(2) ರಡಿಯಲ್ಲಿ ವ್ಯವಸಾಯೇತರ ಬಳಕೆಗೆ ಭೂಪರಿವರ್ತನೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 06 ಸಿಎಜಿ 2008, ದಿ : 28-09-2008 ರನ್ವಯ ಖಡ್ಡಾಯ ಗೊಳಿಸಲಾಗಿದೆ. ಪಟ್ಟಾಭೂಮಿಯಲ್ಲಿ ಉಪಖನಿಜಗಳಿಗೆ ಕಲ್ಲು ಗಣಿಗಾರಿಕೆ ಮಾಡಲು ಸದರಿ ಭೂಮಿಯನ್ನು ವ್ಯವಸಾಯೇತರ ಬಳಕೆಗೆ ಭೂಪರಿವರ್ತನೆ ಮಾಡುವುದರಿಂದ ವಿನಾಯ್ತಿ ನೀಡುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಮಟ್ಟದ ಸಮನ್ವಯ / ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಚರ್ಚಿಸಿ, ಭೂಪರಿವರ್ತನಾ ಆದೇಶಗಳನ್ನು ಶೀಘ್ರವಾಗಿ ವಿತರಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಇ) ಭೂಕಂದಾಯ ಅಧಿನಿಯಮ 1964ರ ಕಲಂ 95(2) ಕ್ಕೆ ಸೂಕ್ತ ತಿದ್ದುಪಡಿಯನ್ನು ತರುವ ಬಗ್ಗೆ ಕಂದಾಯ ಇಲಾಖೆಯ ವತಿಯಿಂದ ಪರಿಶೀಲಿಸಲಾಗುವುದು.

ದಾಂಡೇಲಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವುದು.

89 (170)

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ)

ಅ) ಹಳಿಯಾಳ ತಾಲ್ಲೂಕು ದಾಂಡೇಲಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ತಾಲ್ಲೂಕು ಕೇಂದ್ರವನ್ನಾಗಿ ಎಂದಿನಿಂದ ಘೋಷಿಸಲಾಗುವುದು?

ಇ) ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾರ್ಪಡಿಸುವವರೆಗೂ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುವುದಾಗಿ ಸರ್ಕಾರ ಈ ಹಿಂದೆ ಸದನದಲ್ಲಿ ಭರವಸೆ ನೀಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ವಿಶೇಷ ತಹಶೀಲ್ದಾರ್‌ರನ್ನು ನೇಮಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಉ) ಹಾಗಿದ್ದಲ್ಲಿ, ವಿಶೇಷ ತಹಶೀಲ್ದಾರ್‌ರನ್ನು ಯಾವಾಗ ನೇಮಕ ಮಾಡಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ತಾಲ್ಲೂಕು ಪುನರ್ ರಚನಾ ಸಮಿತಿಗಳು ಯಾವ ಯಾವ ನಗರ / ಪಟ್ಟಣಗಳನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾರ್ಪಡಿಸಲು ಶಿಫಾರಸ್ಸು ಮಾಡಿದ್ದ ಪ್ರಕರಣಗಳಲ್ಲಿ ತಾಲ್ಲೂಕು ಕೇಂದ್ರದ ಘೋಷಣೆಯಾಗುವವರೆಗೆ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು.

ಈ) ದಾಂಡೇಲಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಲು ತಾಲ್ಲೂಕು ಪುನರ್ ರಚನಾ ಸಮಿತಿಗಳು ಶಿಫಾರಸ್ಸು ಮಾಡಿಲ್ಲದೇ ಇರುವುದರಿಂದ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಸಾಲದ ವಿವರ ಒದಗಿಸುವುದು

39 : (174)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) 2009–10, 2010–11 ಹಾಗೂ 2011–12ನೇ ಆರ್ಥಿಕ ವರ್ಷಗಳಲ್ಲಿ ಕೇಂದ್ರ ಸರ್ಕಾರ / ಹಣಕಾಸು ಸಂಸ್ಥೆಗಳಿಂದ / ಖಾಸಗಿ ಸಂಸ್ಥೆಗಳಿಂದ ಹಾಗೂ ಇನ್ನಿತರ ಮೂಲಗಳಿಂದ ಪಡೆದುಕೊಂಡಿರುವ ಸಾಲದ ಮೊತ್ತವೆಷ್ಟು (ವಿವರವನ್ನು ಒದಗಿಸುವುದು)

ಆ) ಈ ಆರ್ಥಿಕ ವರ್ಷಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಹಾಗೂ ಪಂಚಾಯತ್ ರಾಜ್ / ನಗರಸಭಾ ಆಡಳಿತಕ್ಕೆ ನೀಡಿದ ಹಣವೆಷ್ಟು (ವಿವರವನ್ನು ಒದಗಿಸುವುದು)

ಇ) ಇದರಲ್ಲಿ ರಾಜ್ಯ ಸರ್ಕಾರದ ತೆರಿಗೆಯ ಪಾಲು / ಸಹಾಯಧನ (ಸಬ್ಸಿಡಿ) ಅನುದಾನ (ಗ್ರಾಂಟ್ಸ್) ಎಷ್ಟು (ವಿವರವನ್ನು ಒದಗಿಸುವುದು)

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ವಿವರ ಈ ಕೆಳಗಿನಂತಿದೆ :